# ಶ್ವೇತಾ ಸವಾಲಿನ ಜಪ!

ಎರಡು ವರ್ಷದ ಹಿಂದೆ ತೆರೆಕಂಡ 'ಮಸಾನ್' ಚಿತ್ರ ನೋಡಿದವರಿಗೆ ಶ್ವೇತಾ ತ್ರಿಪಾಠಿ ಎಂಬ ನಟಿಯ ಪರಿಚಯವಿರುತ್ತದೆ. ಬಣ್ಣದ ಬದುಕಿಗೆ ಕಾಲಿಟ್ಟ ಆರು ವರ್ಷಗಳಲ್ಲಿ ಶ್ವೇತಾ ನಟಿಸಿರುವುದು ಧಾರಾವಾಹಿ ಮತ್ತು ಕಿರುಚಿತ್ರ ಮತ್ತು ಮೂರು ಚಿತ್ರಗಳಲ್ಲಿ ಮಾತ್ರ. ಭಾವತೀವ್ರತೆಯ ಪಾತ್ರಗಳಲ್ಲಿ ಶ್ವೇತಾ ತೀಕ್ಷ್ಣ ಅಭಿನಯದ ಮೂಲಕ ಗಮನ ಸೆಳೆದ ನಟಿ. ಪ್ರಯೋಗಾತ್ಮಕ ಪಾತ್ರಗಳಿಗೆ ಆದ್ಯತೆ ನೀಡುವ ಆಕೆಗೆ ಗ್ಲಾಮರಸ್ ಪಾತ್ರಗಳಲ್ಲಿ ನಟಿಸಲು ಯಾವ ಅಂಜಿಕೆಯೂ ಇಲ್ಲವಂತೆ. ಆದರೆ ಕಲಾವಿದೆಯಾಗಿ ತನ್ನನ್ನು ಸವಾಲಿಗೆ ಒಡ್ಡುವ ಪಾತ್ರವಾಗಿರಬೇಕು ಎನ್ನುವ ಷರತ್ತನ್ನೂ ಆಕೆ ಹಾಕುತ್ತಾಳೆ.

ಬೆಳ್ಳಿ ಪರದೆ ಮೇಲೆ ಕಾಣಿಸಿಕೊಂಡರೂ ಧಾರಾವಾಹಿ ನಟಿ ಎಂದೇ ತನ್ನನ್ನು ಗುರುತಿಸುತ್ತಿರುವುದರ ಬಗ್ಗೆ ಆಕೆಗೆ ಅರಿವಿದೆ. ಹಾಗೆಂದು ತನ್ನ 'ಇಮೇಜ್' ಮುರಿಯಲು ಸಂಪ್ರದಾಯಿಕ ಹೀರೊಯಿನ್ ಪಾತ್ರಗಳಲ್ಲಿ ನಟಿಸಲು ಆಕೆಗೆ ಇಷ್ಟವಿಲ್ಲ. ಆಕೆಯನ್ನು ಭೇಟಿ ಮಾಡುವ ಅನೇಕ ನಿರ್ದೇಶಕರು 'ಇದು ಗ್ಲಾಮರಸ್ ಪಾತ್ರ' ಎಂದು ವಿವರಿಸುತ್ತಾರಂತೆ. ಆದರೆ, ಮೊದಲು ಕಥೆ ತೋರಿಸಿ ಎಂದು ಆಕೆ ಕೇಳಿದರೆ, 'ಅದನ್ನು ಕಳಿಸುತ್ತೇವೆ. ಆದರೆ ಇದು ಗ್ಲಾಮರಸ್' ಎಂದು ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ ಎಂದು ನಿರ್ದೇಶಕರ ವರ್ತನೆಯನ್ನು ಟೀಕಿಸಿದ್ದಾಳೆ. 'ನನಗೆ ಗ್ಲಾಮರಸ್ ಪಾತ್ರಗಳಲ್ಲಿ ನಟಿಸುವುದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಹಾಗೆ ಕೊಡುವ ಪಾತ್ರಕ್ಕೆ ತೂಕವಿರಬೇಕು. ಗ್ಲಾಮರ್‌ಗಾಗಿ ನಾನು ಸಿನಿಮಾ ಮಾಡಲಾರೆ' ಎಂದಿದ್ದಾಳೆ ಆಕೆ.

ತನಗೆ ಸವಾಲು ಹಾಕದ ಸಂಗತಿಗಳಿಗೆ ಒಪ್ಪಿಕೊಳ್ಳಲು ಆಕೆ ಬಯಸುವುದಿಲ್ಲ. ಒಂದೇ ಪಾತ್ರ ಅಥವಾ ಒಂದೇ ಸಾಲು ಎನ್ನುವುದು ತನಗೆ ಮುಖ್ಯವಲ್ಲ. ಅದು ಪ್ರಭಾವಶಾಲಿಯಾಗಿರಬೇಕು ಎಂಬ ಬಯಕೆ ಆಕೆಯದು. ಈ ಕಟ್ಟುಪಾಡಿನ ಕಾರಣಕ್ಕಾಗಿಯೇ ಶ್ವೇತಾ ನಟಿಸಿದ ಚಿತ್ರಗಳ ಸಂಖ್ಯೆ ಬೆರಳೆಣಿಕೆಯನ್ನು ದಾಟಿಲ್ಲ. ಈ ಬಗ್ಗೆ ಆಕೆಗೆ ಬೇಸರವೂ ಇಲ್ಲ.



# ಸ್ಪರ್ಧೆಯ ಚಿಂತೆಯೇ ಇಲ್ಲ!

ಐದು ವರ್ಷಗಳ ಬಾಲಿವುಡ್ ಯಾನದಲ್ಲಿ ಡಯಾನಾ ಪೆಂಟಿ ನಟಿಸಿರುವುದು ಎರಡೇ ಎರಡು ಸಿನಿಮಾಗಳಲ್ಲಿ. ಸಿನಿಮಾಕ್ಕಿಂತ ಮಾಡೆಲಿಂಗ್ ಜಗತ್ತಿನೆಡೆಗೇ ಆಕೆಗೆ ಹೆಚ್ಚು ಒಲವು. ವರ್ಷಕ್ಕೆ ಮೂರು ನಾಲ್ಕು ಸಿನಿಮಾಗಳನ್ನು ಮಾಡುವ ನಟಿಯರ ಸಾಲಿಗೆ ಸೇರಲು ಆಕೆಗೆ ಉತ್ಸಾಹವಿಲ್ಲ. ಸಂಖ್ಯೆಯ ಲೆಕ್ಕಾಚಾರದ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎನ್ನುವ ಡಯಾನಾ, ಚಿತ್ರಲೋಕದ ಸ್ಪರ್ಧೆಯ ಕುರಿತು ಎಳ್ಳಷ್ಟೂ ನಂಬಿಕೆ ಹೊಂದಿಲ್ಲವಂತೆ. ಹಾಗೆಂದು ಆಕೆ ಸಿನಿಮಾಗಳಿಂದ ವಿಮುಖಳಾಗಿಲ್ಲ. ಇತರೆ ನಟಿಯರು ಯಾವ ರೀತಿಯ ಸಿನಿಮಾ ಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದಾರೆ. ಅವರ ಸಿನಿಮಾಗಳನ್ನು ಮುಕ್ತವಾಗಿ ಪ್ರಶಂಸಿಸುವುದರಲ್ಲಿಯೂ ಆಕೆ ಮುಂದು.

'ಕಾಕ್‌ಟೇಲ್' ಮತ್ತು 'ಹ್ಯಾಪಿ ಭಾಗ್ ಜಾಯೇಗಿ' ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ಡಯಾನಾ, ಈಗ 'ಲಖನೌ ಸೆಂಟ್ರಲ್' ಚಿತ್ರಕ್ಕೆ ಬಣ್ಣ ಹಚ್ಚಿದ್ದಾಳೆ. ಇದುವರೆಗಿನ ಬಾಲಿವುಡ್ ನಂಟಿನಲ್ಲಿ ಆಕೆಗೆ ಬೇಸರ ಉಂಟು ಮಾಡುವ ಯಾವುದೇ ಸಂಗತಿ ಎದುರಾಗಿಲ್ಲವಂತೆ. ಬಾಲಿವುಡ್ ಇದುವರೆಗೂ ಅದ್ಭುತ ಅನುಭವ ನೀಡಿದೆ ಎನ್ನುತ್ತಾಳೆ ಡಯಾನಾ. ವೈಯಕ್ತಿಕವಾಗಿ ಆಸಕ್ತಿಕರ ಎನಿಸುವ ಸಿನಿಮಾಗಳನ್ನು ಮಾಡುವುದು ಆಕೆಗೆ ಇಷ್ಟವಂತೆ. 'ಹ್ಯಾಪಿ ಭಾಗ್ ಜಾಯೇಗಿ' ಚಿತ್ರದ ಯಶಸ್ಸಿನ ಬಳಿಕ ಒಳ್ಳೆಯ ಪಾತ್ರಗಳು ತನ್ನನ್ನು ಅರಸಿಕೊಂಡು ಬರಲಿವೆ ಎಂಬ ನಂಬಿಕೆ ಆಕೆಯದು. ಆತುರವಿಲ್ಲದೆ ನಿಧಾನಕ್ಕೆ ಸಿನಿಮಾಗಳನ್ನು ಹೆಕ್ಕಿಕೊಳ್ಳುವ ತಾಳ್ಮೆ ಆಕೆಯಲ್ಲಿ ಇನ್ನೂ ಉಳಿದುಕೊಂಡಿದೆಯಂತೆ.

■ ಅಮಿ

